# ಟ್ರೋಲಿಗನಿಗೆ ಸಲ್ಮಾನ್ ಉರಿ ಉತ್ತರ!

■ **ವಿಶಾಖ ಎನ್.**

ಸಲ್ಮಾನ್‌ಗೆ ಮದುವೆಯಾಗಿದೆ ಎಂದ ಟ್ರೋಲಿಗನಿಗೆ ಖಾರದ ಪ್ರತಿಕ್ರಿಯೆಸಲ್ಮಾನ್ ಖಾನ್ ಬಾಲಿವುಡ್‌ನ 'ಮೋಸ್ಟ್ ಎಲಿಜಬಲ್ ಬ್ಯಾಚುಲರ್' ಎಂದೆನಿಸಿಕೊಳ್ಳತೊಡಗಿ ವರ್ಷಗಳೇ ಉರುಳಿವೆ. ನೆಟ್ಟಿಗನ ಹಳೆಯ ಟ್ರೋಲ್ ಒಂದು ಈಗ ಈ ನಟನನ್ನು ಕೆರಳಿಸಿದೆ. ಸಲ್ಮಾನ್ ಸಹೋದರ ಅರ್ಬಾಜ್ ಖಾನ್ 'ಪಿಂಚ್' ಎಂಬ ಟಿ.ವಿ. ಕಾರ್ಯಕ್ರಮ ನಡೆಸಿಕೊಡುತ್ತಾರೆ. ಸಾಮಾಜಿಕ ಜಾಲತಾಣಗಳಲ್ಲಿ ಅಭಿಮಾನಿಗಳು ಹಾಗೂ ವಿರೋಧಿಗಳು ಮಾಡಿರುವ ಪೋಸ್ಟ್‌ಗಳನ್ನು ಉಲ್ಲೇಖಿಸುತ್ತಾ, ಅವುಗಳ ಕುರಿತು ಅತಿಥಿಯಿಂದ ಪ್ರತಿಕ್ರಿಯೆ ಹೊರಡಿಸುವ ಮಾದರಿಯ ಕಾರ್ಯಕ್ರಮ ಇದು. ಟ್ರೋಲ್‌ಗಳಿಗೆ ಸೆಲೆಬ್ರಿಟಿಗಳು ಉತ್ತರಿಸುವುದೇ ಮಜಾ ಎಂಬ ಪರಿಕಲ್ಪನೆ. ಈ ಕಾರ್ಯಕ್ರಮದ ಕುರಿತು ಪರ–ವಿರೋಧದ ಚರ್ಚೆಗಳೂ ನಡೆಯುತ್ತಿವೆ. ಅದರ ಜನಪ್ರಿಯತೆಗೆ ಇದೂ ಇಂಧನವಾಗಬಲ್ಲದು.

ಇಂತಹ ಕಾರ್ಯಕ್ರಮಕ್ಕೆ ಸಲ್ಮಾನ್ ಅತಿಥಿಯಾಗಿದ್ದರು. 'ಸಲ್ಮಾನ್‌ಗೆ ಈಗಾಗಲೇ ನೂರ್ ಎಂಬುವವರ ಜತೆ ಮದುವೆಯಾಗಿದೆ. 17 ವರ್ಷದ ಮಗನೂ ಇದ್ದಾನೆ. ಅವರು ದುಬೈನಲ್ಲಿ ನೆಲೆಗೊಂಡಿದ್ದು, ಗುಟ್ಟಾಗಿ ಸಲ್ಮಾನ್ ಸಂಸಾರ ನಡೆಸುತ್ತಿದ್ದಾರೆ. ಭಾರತ ಮಾತೆಯ ಜನರಿಗೆ ಈ ವಿಷಯವನ್ನು ಗುಟ್ಟಾಗಿಟ್ಟಿರುವುದು ಯಾಕೆ' ಎಂದೆಲ್ಲ ಪ್ರಶ್ನಿಸುತ್ತಾ, ಕೆಲವು ಕೆಟ್ಟ ಶಬ್ದಗಳನ್ನೂ ಬಳಸಿ ಟ್ರೋಲಿಗನೊಬ್ಬ ಸಂದೇಶ ಹಾಕಿದ್ದ. ಇದನ್ನು ಓದಿ, ಅರ್ಬಾಜ್ ಪ್ರತಿಕ್ರಿಯೆಯನ್ನು ಕೇಳಿದರು. ಮೊದಲಿಗೆ ಇದನ್ನು ಕೇಳಿ ಚಕಿತರಾದ ಸಲ್ಮಾನ್, ಆಮೇಲೆ ಕೋಪದ ಭಾವದಲ್ಲಿ ಪ್ರತಿಕ್ರಿಯೆ ಕೊಟ್ಟರು. 'ಈ ಜನರಿಗೆ ನನ್ನ ಬಗ್ಗೆ ಸಾಕಷ್ಟು ಸಂಶೋಧನೆ ಮಾಡುವ ಕುತೂಹಲ. ನಾನು ಒಂಬತ್ತನೇ ವಯಸ್ಸಿನಿಂದ ಮುಂಬೈನ ಅಪಾರ್ಟ್‌ಮೆಂಟ್‌ನಲ್ಲೇ ವಾಸ ಮಾಡುತ್ತಿರುವೆ. ಇಂತಹ ತಲೆಬುಡವಿಲ್ಲದೆ ಅಭಿಪ್ರಾಯ ಮಂಡಿಸುವವರಿಗೆ ಉತ್ತರ ಕೊಡುವ ಅಗತ್ಯವಿಲ್ಲ' ಎನ್ನುವುದು ಸಲ್ಮಾನ್ ಪ್ರತಿಕ್ರಿಯೆ. ■






# ತೂಕದ ಉಸಾಬರಿ

ಪುರುಷರು ಪಾತ್ರಕ್ಕಾಗಿ ದೇಹಾಕಾರ ಬದಲಿಸಿಕೊಳ್ಳುವುದನ್ನು ಹೊಗಳುತ್ತಿರುತ್ತೇವೆ. ಅಮೀರ್ ಖಾನ್ 'ದಂಗಲ್'ನಲ್ಲಿ, ಸಲ್ಮಾನ್ ಖಾನ್ 'ಸುಲ್ತಾನ್'ನಲ್ಲಿ, ಫರ್ಹಾನ್ ಅಖ್ತರ್ 'ತೂಫಾನ್'ನಲ್ಲಿ ಹೊಟ್ಟೆ ಬರಿಸಿಕೊಂಡು, ಕರಗಿಸಿಕೊಂಡಿದ್ದನ್ನು ಸವಿವರವಾಗಿ ಓದಿದ್ದೇವೆ. ಈಗ ಕೃತಿ ಸನನ್ ಪಾತ್ರವೊಂದಕ್ಕಾಗಿ 15 ಕೆ.ಜಿ. ತೂಕ ಹೆಚ್ಚಿಸಿಕೊಂಡು, ಮತ್ತೆ ಅದನ್ನು ತಗ್ಗಿಸಿಕೊಳ್ಳುವ ಕಷ್ಟವನ್ನು ಹಂಚಿಕೊಂಡಿದ್ದಾರೆ.

'ಮಿಮಿ' ಎಂಬ ಹಿಂದಿ ಸಿನಿಮಾದಲ್ಲಿ ಅವರದ್ದು ಬಾಡಿಗೆ ತಾಯಿಯ ಪಾತ್ರ. ಅದಕ್ಕಾಗಿ ಅವರು ಮೂರು ತಿಂಗಳಲ್ಲಿ ಹದಿನೈದು ಕೆ.ಜಿ. ತೂಕ ಹೆಚ್ಚಿಸಿಕೊಂಡರು. ಈ ಅವಧಿಯಲ್ಲಿ ಕೆಲವು ಪ್ರಶಸ್ತಿ ಪ್ರದಾನ ಸಮಾರಂಭಗಳಲ್ಲಿ ನರ್ತಿಸುವಂತೆ ಆಹ್ವಾನ ಬಂದಾಗ ಅನಿವಾರ್ಯವಾಗಿ ತಿರಸ್ಕರಿಸಿದರು. ಬೇರೆ ಯಾವ ಚಿತ್ರದ ಪಾತ್ರಗಳನ್ನು ಒಪ್ಪಿಕೊಳ್ಳಲೂ ಆಗಲಿಲ್ಲ. ಬಿಡುವಿದ್ದರೂ ಬೇರೆ ಸಿನಿಮಾಗಳಲ್ಲಿ ಅಭಿನಯಿಸಲು ಸಾಧ್ಯವಾಗದಷ್ಟು ದಪ್ಪ ಆಗಿದ್ದೇ ಇದಕ್ಕೆ ಕಾರಣ. ಆಮೇಲೆ ತೂಕ ಇಳಿಸಿಕೊಳ್ಳಲು ಕೂಡ ಎರಡು ಮೂರು ತಿಂಗಳು ಬೇಕಾಯಿತು.

ಮೂವತ್ತರ ಹರೆಯದ ನಟಿ ಹೀಗೆ ದೊಡ್ಡ ಪ್ರಮಾಣದಲ್ಲಿ ದೇಹ ತೂಕ ಹೆಚ್ಚಿಸಿಕೊಂಡು, ಕಡಿಮೆ ಮಾಡಿಕೊಳ್ಳುವುದು ಸುಲಭವಲ್ಲ ಎಂದು ಕೃತಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

ಲವಲವಿಕೆಯಿಂದ ಇರುವ, ಚುರುಕುಮತಿ ಹೆಣ್ಣುಮಗಳೊಬ್ಬಳು ಹಣಕ್ಕಾಗಿ ಬಾಡಿಗೆ ತಾಯಿಯಾಗುವ ಪ್ರಹಸನವನ್ನು ಒಳಗೊಂಡ 'ಮಿಮಿ' ಚಿತ್ರ ತಮ್ಮ ವೃತ್ತಿಬದುಕಿನಲ್ಲಿ ಪ್ರಮುಖವಾಗಲಿದೆ ಎಂದು ಅವರು ನಂಬಿದ್ದಾರೆ. ಲಕ್ಷ್ಮಣ್ ಉಟೇಕರ್ ನಿರ್ದೇಶನದ ಈ ಚಿತ್ರದಲ್ಲಿ ಪಂಕಜ್ ತ್ರಿಪಾಠಿ, ಮನೋಜ್ ಪಾಹ್ವಾ ಮುಖ್ಯಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಜುಲೈ 30ರಂದು ನೆಟ್‌ಫ್ಲಿಕ್ಸ್‌ನಲ್ಲಿ ಹಾಗೂ ಜಿಯೊ ಒನ್ ವೇದಿಕೆಯಲ್ಲಿ ಪ್ರೇಕ್ಷಕರಿಗೆ ಲಭ್ಯವಾಗಲಿರುವ ಈ ಸಿನಿಮಾ ತಮಗೆ ಇನ್ನಷ್ಟು ಅವಕಾಶಗಳನ್ನು ದಕ್ಕಿಸಿಕೊಡಬಲ್ಲದು ಎಂಬ ಆತ್ಮವಿಶ್ವಾಸ ಕೃತಿ ಸನನ್ ಅವರದ್ದು.

ಈ ಸಿನಿಮಾ ಅಲ್ಲದೆ ಆದಿಪುರುಷ್, ಬಚ್ಚನ್ ಪಾಂಡೆ, ಬೇಡಿಯಾ, ಗಣಪತ್, ಹಮ್ ದೋ ಹಮಾರೆ ದೋ ಚಿತ್ರಗಳಲ್ಲೂ ಕೃತಿ ಅಭಿನಯಿಸಿದ್ದಾರೆ. ಅವೆಲ್ಲವೂ ಒಂದಾದ ಮೇಲೆ ಒಂದರಂತೆ ತೆರೆಕಾಣಲಿರುವುದು ಈ ನಟಿ ಎಷ್ಟು ಬ್ಯುಸಿ ಎನ್ನುವುದಕ್ಕೆ ಕನ್ನಡಿ ಹಿಡಿಯುತ್ತದೆ. ■